# ಆದಿಕೇಶವನೊಲಿದ ಕುರಿಗಾಹಿ

**ಸರಸ್ವತಿ ವಿಜಯನಾರಸಿಂಹ**

ವ್ಯಾಸರಾಜರ ಶಿಷ್ಯರೂ ಪುರಂದರದಾಸರ ಸಮಕಾಲೀನರೂ ಆಗಿದ್ದ ಕನಕದಾಸರು ಕಾಗಿನೆಲೆಯ ಸಮೀಪದ 'ಬಾಡ' ಎಂಬ ಹಳ್ಳಿಯವರು. ಅವರ ತಂದೆ ಬೀರೇಗೌಡ ಮೂರು ಹಳ್ಳಿಗಳ ನಾಯಕನಾಗಿದ್ದ; ತಿರುಪತಿಯ ತಿಮ್ಮಪ್ಪನ ಕೃಪೆಯಿಂದ ಜನಿಸಿದ ಮಗುವಿಗೆ 'ತಿಮ್ಮಪ್ಪ' ಎಂದು ನಾಮಕರಣ ಮಾಡಿದ. ತಂದೆಯಂತೆ ಮಗನೂ ನಾಯಕನಾಗುವ ಎಲ್ಲ ಲಕ್ಷಣಗಳನ್ನು ಪಡೆದ. ನಂತರ ಮದುವೆಯಾಗಿ ಮಕ್ಕಳನ್ನು ಪಡೆದು, ಸಂತೃಪ್ತ ಜೀವನ ನಡೆಸುತ್ತಿದ್ದ. ಆಗ ಅವನಿಗೆ ಕಾಗಿನೆಲೆಯ ಆದಿಕೇಶವನಿಗೆ ಒಂದು ಭವ್ಯ ದೇವಾಲಯವನ್ನು ಕಟ್ಟಿಸಬೇಕೆಂಬ ಮನಸ್ಸಾಯಿತು. ದೇವಾಲಯದ ಕೆಲಸ ನಡೆಯುತ್ತಿದ್ದಾಗ, ಧನಕನಕ ತುಂಬಿದ ಕೊಪ್ಪರಿಗೆಗಳು ಅತನಿಗೆ ದೊರೆತವು. ಆದ್ದರಿಂದಲೇ ತಿಮ್ಮಪ್ಪ, 'ಕನಕಪ್ಪ' ನೆಂದೂ, 'ಕನಕನಾಯಕ'ನೆಂದೂ ಹೆಸರು ಪಡೆದ. ದೇವಾಲಯದ ಕೆಲಸ ಮುಗಿಯುತ್ತಿದ್ದಂತೆ, ಅವನಿಗೆ ವಿಚಿತ್ರವಾದ ಕನಸು ಕಾಣಿಸಿತು. ಆದಿಕೇಶವ ಮುದುಕನಂತೆ ಬಂದು, "ಕನಕ! ದಾಸನಾಗುವೆಯಾ?" ಎಂದಂತಾಯಿತು. "ಈ ಬಗೆಯ ಅತುಳ ಐಶ್ವರ್ಯವಿರುವಾಗ, ನಾನು ದಾಸನಾಗುವುದೇ?" ಎಂದು ಕನಕ ಹೇಳಿದ. ಆಗ ಆ ಮುದುಕ ಎಚ್ಚರಿಸಿದ, "ಈ ಐಶ್ವರ್ಯ ಸ್ಥಿರವಲ್ಲ. ಎಂದಾದರೂ ನಾಶವಾಗುವಂತದ್ದು. ಸ್ಥಿರಭಕ್ತಿಯಿಂದ ನನ್ನ ದಾಸನಾಗು." "ಖಂಡಿತ ನಾನು ದಾಸನಾಗಲಾರೆ. ಕುರುಬನಾದ ನಾನು ಕುರಿ ಕಾದು ಕಷ್ಟಪಟ್ಟೇನು. ಆದರೆ ದಾಸನಾಗಲಾರೆ" ಎಂದ ಕನಕ. ಆದಿಕೇಶವನು ಮತ್ತೆಂದೂ ಕನಸಿನಲ್ಲಿ ಬಂದು ತೊಂದರೆ ಕೊಡದಿರಲಿ ಎಂದು ದೇವಾಲಯದಲ್ಲಿ ವಿಶೇಷ ಪೂಜೆ ಏರ್ಪಡಿಸಿದ. ಆದರೂ ಮತ್ತೆ ಮತ್ತೆ ಕನಕನಿಗೆ ಇಂಥ ಕನಸು ಬೀಳುತ್ತಲೇ ಇತ್ತು.

ಕನಕನಾಯಕನಿಗೆ ಒಂದಾದ ಮೇಲೊಂದು ಆಘಾತಗಳು ಬಂದೆರಗಿದವು. ಶತ್ರುಸೇನೆ ಅವನ ಆಳ್ವಿಕೆಯ ಹಳ್ಳಿಗಳನ್ನೆಲ್ಲ ಲೂಟಿ ಮಾಡಿ ಅವನ ದೊಡ್ಡ ಮನೆಯನ್ನು ಮುತ್ತಿಗೆ ಹಾಕಿತು. ದುಷ್ಟರ ಆಕ್ರಮಣದಿಂದ ಕನಕನಾಯಕ ತನ್ನದೆಲ್ಲವನ್ನೂ ಕಳೆದುಕೊಂಡ. ಮಡದಿಮಕ್ಕಳು ಇವನ ಕಣ್ಣೆದುರಿಗೇ ಹತರಾದರು. ಇವನಿಗೂ ದೇಹ ಜರ್ಝರಿತವಾಗುವಷ್ಟು ಪೆಟ್ಟು ಬಿದ್ದಿತು. ಪ್ರಜ್ಞೆ ತಪ್ಪಿ ಮಣ್ಣಿನಲ್ಲಿ ಅವನು ಬಿದ್ದ. ಅಂತಹ ಸ್ಥಿತಿಯಲ್ಲಿಯೂ ಆದಿಕೇಶವ ಅವನ ಬಳಿ ಬಂದು ಕೇಳಿದ, "ಈಗಲಾದರೂ ನನ್ನ ದಾಸನಾಗುವೆಯಾ?" ಆಗ ಕನಕ, "ಸಾಯುತ್ತಾ ಬಿದ್ದಿರುವ ನಾನು ನಿನ್ನ ದಾಸನಾಗಬೇಕೆ? ಏಕೆ ಹೀಗೆ ನನ್ನನ್ನು ಕಾಡುತ್ತಿರುವೆ, ಕೇಶವ?" ಎಂದ. ಆಗ ಆದಿಕೇಶವ ನಕ್ಕು ಹೇಳಿದ, "ಕನಕ, ನಾನು ಕಾಡುವವನಲ್ಲ. ನಿನ್ನಲ್ಲಿ ನನಗೆ ಅಪಾರ ಪ್ರೇಮ. ನೀನು 'ಹೂಂ' ಅನ್ನು. ನಿನ್ನ ನೋವನ್ನೆಲ್ಲ ನಾನು ಕಳೆಯುತ್ತೇನೆ." ಆಗ ಕನಕನಿಗೆ ಬೇರೆ ದಾರಿಯಿರಲಿಲ್ಲ. 'ಹೂಂ' ಎನ್ನುವಂತೆ ತಲೆಯಾಡಿಸಿದ. ಕನಕನ ಕಡೆಗೆ ದಿವ್ಯಪ್ರಕಾಶವೊಂದು ಹರಿದಂತಾಯಿತು. ಅವನ ನೋವೆಲ್ಲ ಮಾಯವಾಯಿತು. ಎಂಥ ದಿವ್ಯಸ್ಪರ್ಶ! ಕನಕ ತನ್ನ ಎಲ್ಲ ಐಶ್ವರ್ಯವನ್ನೂ ಕಳೆದುಕೊಂಡಿದ್ದ. ಆದರೂ ಈ ದಿವ್ಯಸ್ಪರ್ಶದ ಮುಂದೆ ಅವ್ಯಾವುದೂ ಅವನಿಗೆ ಬೇಕು ಅನ್ನಿಸಲಿಲ್ಲ. ಅಂತಹ ದಿವ್ಯಸ್ಪರ್ಶ ಅದು! ಅಂತಹ ದಿವ್ಯವಾಣಿ ಆದಿಕೇಶವನದು!

ಕನಕ "ಕೇಶವ, ಕೇಶವ" ಎನ್ನುತ್ತ ಸುತ್ತಮುತ್ತಲೂ ನೋಡಿದ. ಆ ಮಾಯಾಮಯನಾದ ಕೇಶವನೆಲ್ಲೂ ಕಾಣಲಿಲ್ಲ. ಅವನಿಗಾಗಿ ಪರಿತಪಿಸಿ, ಕಾಡುಮೇಡು ಅಲೆಯುತ್ತಾ ಊರೂರು ತಿರುಗಿದ. ಬೇಲೂರು–ಹಂಪಿ ಇನ್ನೂ ಎಲ್ಲೆಲ್ಲೋ ಸುತ್ತಿದ. "ನಿನ್ನ ಸ್ಪರ್ಶವೇ ಇಷ್ಟು ಸುಖಮಯವಾಗಿರುವಾಗ ನಿನ್ನ ರೂಪ ಹೇಗಿದ್ದೀತು? ಕೇಶವ! ನಿನ್ನನ್ನು ಕಾಣದವರೆಗೂ ನನ್ನ ಜೀವ ನಿಲ್ಲದು" ಎಂದು ಅಲೆಯುತ್ತಾ ಉಡುಪಿಗೆ ಬಂದ. ಭಗವದ್ಭಕ್ತಿಯಲ್ಲಿ ಲೀನನಾದ ಅವನಿಗೆ ಶ್ರೀಹರಿಯ ದರ್ಶನವೊಂದೇ ಬೇಕಾಗಿದ್ದುದು! ಮಧ್ಯರಾತ್ರಿಯಲ್ಲಿ ದೇವಾಲಯದ ಬಾಗಿಲುಗಳನ್ನೆಲ್ಲ ಬೀಗಮುದ್ರೆ ಹಾಕಿ ಮುಚ್ಚಿದ್ದರು. ಕನಕ ಹೊರಗಿನ ಆವರಣದಲ್ಲೆಲ್ಲಾ ಸುತ್ತಿದ. "ಕೇಶವ, ಕೇಶವ" ಎನ್ನುತ್ತ ಆವರಣದಲ್ಲಿ ದೇವಾಲಯದ ಹಿಂದೆಯೇ ಗೋಡೆಯ ಬಳಿ ನಿಂತು, ಆರ್ದ್ರನಾಗಿ ಭಗವಂತನನ್ನು ಕರೆದ. ಕಣ್ಣುಗಳಲ್ಲಿ ಅಶ್ರು ಸುರಿದು ಹೋಗುತ್ತಿತ್ತು. ಭಾವುಕನಾಗಿ ಹಾಡಿದ:

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ
ಕೂಗಿದರು ದನಿ ಕೇಳಲಿಲ್ಲವೆ, ನರಹರಿಯೇ

ಭಕ್ತನನ್ನು ಅರಸಿ ತಾನಾಗಿ ಒಲಿದು ಬಂದ ಕೇಶವ, ಕನಕನ ಮೊರೆಗೆ ಓಗೊಟ್ಟ, ದೇಗುಲದ ಬಾಗಿಲು ಹಾಗೆಯೇ ಇತ್ತು. ಆದರೂ ಕನಕ ಇದ್ದ ದಿಕ್ಕಿನ ಗೋಡೆಯಲ್ಲಿ ದೊಡ್ಡದೊಂದು ಕಿಂಡಿಯಾಗಿ, ಪರಮಾತ್ಮನ ದರ್ಶನದ ಭಾಗ್ಯ ಆ ಭಕ್ತಾಗ್ರೇಸರನಿಗೆ ಲಭ್ಯವಾಯಿತು. ಇಂದಿಗೂ ಉಡುಪಿಯ ಕೃಷ್ಣ ದೇಗುಲದಲ್ಲಿ 'ಕನಕನ ಕಿಂಡಿ' ಯನ್ನು ನೋಡಬಹುದು.

ಆದಿಕೇಶವನು ಭಕ್ತನನ್ನು ಸಂತೈಸಿದ. ಭಗವಂತನ ಕರುಣೆ

ಶ್ರೀಮತಿ ಸರಸ್ವತಿ ಅವರು ಕನ್ನಡದ ಹೆಸರಾಂತ ಚಲನಚಿತ್ರ ಸಂಗೀತ ನಿರ್ದೇಶಕರಾಗಿದ್ದ ವಿಜಯನಾರಸಿಂಹ ಅವರ ಪತ್ನಿ. ಇವರು ಈಗಾಗಲೇ ಈ ಪತ್ರಿಕೆಗೆ ಹಲವಾರು ಲೇಖನಗಳನ್ನೂ, ಚಾರಿತ್ರಿಕ ತಾಣಗಳ ಬಗ್ಗೆ ಪರಿಚಯಗಳನ್ನೂ ಬರೆದುಕೊಟ್ಟಿದ್ದಾರೆ. ಇವರು ರಾಮಕೃಷ್ಣ ಆಶ್ರಮದ ಭಕ್ತರು.

ಯಿಂದ ತುಂಬಿಹೋದ ಕನಕ, 'ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವ' ಎಂದು ಭಾವುಕನಾಗಿ ಹಾಡಿದ.

'ರಾಯ ಮುನಿದರೆ ರಾಜ್ಯವನು ಬಿಡಬಹುದೀ
ಒಡಲು ಹಸಿದರೆ ಅನ್ನವನು ಬಿಡಬಹುದು
ಕಡಲೊಡೆಯ ನಿನ್ನಡಿಯ ಗಳಿಗೆಯೂ ಬಿಡಲಾಗದೋ'

ಎಂದು ಹಾಡುತ್ತ ಅಲ್ಲೇ ಕುಸಿದು ಬಿದ್ದ. ಅವನನ್ನು ಸಂತೈಸಿದ ಪರಮಾತ್ಮನು ಗುರುಗಳಾದ ವ್ಯಾಸತೀರ್ಥರಿಂದ ದೀಕ್ಷೆ ಪಡೆಯುವಂತೆ ಅಣತಿ ಮಾಡಿದನು.

ಹಂಪೆಗೆ ಬಂದ ಕನಕದಾಸರು ಗುರುಗಳನ್ನು ಕಂಡರು. ಮಂತ್ರೋಪದೇಶ ನೀಡಿರೆಂದು ಬೇಡಿದರು. ಗುರುಗಳು ಮುಗುಳ್ನಗುತ್ತ, "ಕುರುಬನಿಗೇನೋ ಕೋಣಮಂತ್ರ" ಎಂದರು. ಅಷ್ಟೇ ಸಾಕು! "ಗುರುವೇ, ಮಹದೋಪಕಾರವಾಯಿತು" ಎಂದು ಅಲ್ಲಿಂದ ಹೊರಟರು ಕನಕದಾಸರು. ಸುತ್ತಲಿದ್ದವರೆಲ್ಲಾ, ಅಚ್ಚರಿಯಿಂದ ನೋಡಲು ಗುರುಗಳು ಹೇಳಿದರು, "ಈ ಕನಕ ಬೇರಾರೂ ಅಲ್ಲ. ಯಮನ ಅಂಶ, ಯಮ ವಿಷ್ಣುವಿನ ಮಹಾಭಕ್ತ. ಆದ್ದರಿಂದಲೇ ಅವನಿಗೆ ನಾನು ಹೇಳಿದ್ದು ಅರ್ಥವಾಯಿತು."

ವ್ಯಾಸತೀರ್ಥರು ಕನಕದಾಸರಿಗೆ ಮಠದಲ್ಲಿರಲು ಅವಕಾಶ ಕೊಟ್ಟರು. ಶಾಸ್ತ್ರಬದ್ಧವಾಗಿ ಹರಿದಾಸದೀಕ್ಷೆಯನ್ನಿತ್ತರು. ಪರಮಾನಂದಭರಿತರಾದ ಕನಕದಾಸರು, ಅದಾಗಲೇ,

ಬದುಕಿದೆನು, ಬದುಕಿದೆನು ಭವ ಎನಗೆ ಹಿಂಗಿತು
ಪದುಮನಾಭನ ಪಾದದೊಲುಮೆ ಎನಗಾಯಿತು

ಎಂದು ಭಾವುಕತೆಯಿಂದ ಹಾಡಿದರು.

ಮಠದಲ್ಲಿದ್ದ ಹಲವು ಪಂಡಿತರು ಕನಕದಾಸರನ್ನು ಕೀಳು ಜಾತಿಗೆ ಸೇರಿದವರೆಂದು ತಾತ್ಸಾರದಿಂದ ಕಾಣುತ್ತಿದ್ದರು. ಒಮ್ಮೆ ಗುರುಗಳು ಬೇಕೆಂದೇ ಕನಕದಾಸರನ್ನು ಕೇಳಿದರು, "ಕನಕ, ನಮ್ಮ ಸಭೆಯಲ್ಲಿರುವ ವಿದ್ವಾಂಸರಲ್ಲಿ ಯಾರು ಮೋಕ್ಷಕ್ಕೆ ಹೋಗಬಲ್ಲರು, ಹೇಳು?" ಕನಕದಾಸರು ಎಲ್ಲರನ್ನೂ ನೋಡಿ, ಯಾರೂ ಇಲ್ಲವೆಂಬಂತೆ ತಲೆಯಾಡಿಸಿ, ಕಡೆಗೆ "ನಾನು ಹೋದರೆ ಹೋಗಬಲ್ಲೆನು" ಎಂದು ಹೇಳಿದರು. ಇದು ಪಂಡಿತರನ್ನು ಕೆರಳಿಸಿತು. ಅವರೆಲ್ಲ ಸೇರಿ ಆತನ ಮೇಲೆ ಕೈಮಾಡಲು ಬಂದರು. ಎಲ್ಲರನ್ನೂ ತಡೆದ ವ್ಯಾಸತೀರ್ಥರು, ಕನಕದಾಸರಿಗೆ "ನೀನಾದರೂ ಹೋಗುವೆಯಾ?" ಎಂದರು. ಕನಕದಾಸರು ಆಗ, "ನಾನು–ಹೋದರೆ –ಹೋದೇನು" ಎಂದು ಹೇಳಲು, ಗುರುಗಳೇ ಅವರ ಬಾಯಿಯಿಂದಲೇ ಅದರ ಅರ್ಥವನ್ನು ಬಿಡಿಸಿ ಹೇಳಿಸಿದರು. "ಯಾರೇ ಆಗಲಿ, ನಾನು ಎಂಬುದನ್ನು ತೊರೆಯುವವರೆಗೂ ಮೋಕ್ಷ ಪಡೆಯಲಾರರು. 'ಅಹಂ' ಹೋಗುತ್ತಲೇ ಹೋಗುವರು" ಎಂದು ಕನಕದಾಸರು ನುಡಿದರು. ಈ ಉತ್ತರವನ್ನು ಕೇಳಿ, ನೆರೆದಿದ್ದ ವಿದ್ವನ್ಮಣಿಗಳು ತಲೆಬಾಗಿಸಿ ನಿಂತರು.

ಅದೇ ರೀತಿ ಕನಕದಾಸರು ಬಾಳೆಹಣ್ಣು ತಿನ್ನದ ಪ್ರಸಂಗವೂ ಪ್ರಖ್ಯಾತಿಯಾಗಿದೆ. ಯಾರೂ ಕಾಣದ ಜಾಗದಲ್ಲಿ ಬಾಳೆಹಣ್ಣು ತಿನ್ನಲಾಗದ ಕನಕದಾಸರಿಗೆ, ಗುರುಗಳು ಪ್ರಶ್ನಿಸಿದಾಗ, ಅವರು ಕೊಟ್ಟ ಉತ್ತರ ಇದು: "ಇಲ್ಲಿಹನು ಅಲ್ಲಿಲ್ಲವೆಂಬೀ ಸೊಲ್ಲು ಸಲ್ಲದು."

ಮತ್ತೊಮ್ಮೆ ಪಂಡಿತರು ನೀವು ಕಂಡ ಭಗವಂತನನ್ನು ನಮಗೂ ಒಮ್ಮೆ ತೋರಿಸಿರಿ ಎಂದು ಕನಕದಾಸರಿಗೆ ಬೇಡಿದರು. ಮರುದಿನ ಎಲ್ಲರೂ ಭಗವಂತನಿಗಾಗಿ ಕಾದರು. ಆಗ ಒಂದು ನಾಯಿ ಬಂದಿತು. ಅದನ್ನು ಅವರೆಲ್ಲರೂ ಹೊಡೆದೋಡಿಸಿದರು. ನಂತರ ಆ ಪಂಡಿತರು ಆಕ್ಷೇಪಿಸಿದಾಗ, ಕನಕದಾಸರು, "ಭಗವಂತ ಬಂದಾಗ ನೀವೆಲ್ಲರೂ ಹೊಡೆದೋಡಿಸಿದಿರಿ" ಎಂದರು. ದೇವರನ್ನು ಯಾರೂ ಮತ್ತೊಬ್ಬರಿಗೆ ತೋರಿಸಲಾರರು. ಅದಕ್ಕೇ ಕನಕದಾಸರು ಹಾಡುತ್ತಾರೆ: 'ಬಲ್ಲವರೇ ಬಲ್ಲರು ಎಲ್ಲವರರಿಯರು.'

ಕನಕದಾಸರು ಏಕತಾನವನ್ನು ಹಿಡಿದು, ಹಳ್ಳಿಹಳ್ಳಿಗೂ ಸಂಚರಿಸಿದರು. ಭಕ್ತಿಯ ಹಿರಿಮೆಯನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟರು. ಮೇಲು–ಕೀಳು ಎಲ್ಲವನ್ನೂ ಬದಿಗೊತ್ತಿ, ಜೀವನದಲ್ಲಿ ಮಾನವೀಯತೆಯನ್ನು ಮಾತ್ರ ಉಳಿಸಿಕೊಂಡು, ಸಚ್ಚಿದಾನಂದವನ್ನು ಅನುಭವಿಸಿರೆಂದು ಉಪದೇಶಿಸಿದರು.

ಕನಕದಾಸರು ಸಾವಿರಾರು ಕೀರ್ತನೆಗಳನ್ನಲ್ಲದೆ, 'ಮೋಹನ ತರಂಗಿಣಿ', 'ನಳಚರಿತ್ರೆ', 'ಹರಿಭಕ್ತಿಸಾರ', 'ರಾಮಧ್ಯಾನ ಚರಿತ್ರೆ,' 'ನೃಸಿಂಹಸ್ತವ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಕನಕದಾಸರ ಕೃತಿಗಳಲ್ಲಿ ಸಮಕಾಲೀನ ಜೀವನದ ಪ್ರತಿಬಿಂಬ ಸಿಕ್ಕುತ್ತದೆ. ಇವರ ಕೀರ್ತನೆಗಳಲ್ಲಿ ಸಮಾಜ ವಿಮರ್ಶೆ, ದೈವಭಕ್ತಿ, ಜೀವನದರ್ಶನ, ಲೋಕಾನುಭವ – ಎಲ್ಲವೂ ಕಾವ್ಯಾತ್ಮಕವಾಗಿ ಹೊರಹೊಮ್ಮಿವೆ. ಅವರು ಸಮಾಜದ ಮೂಢರೂಢಿಗಳನ್ನು ಬಯಲಿಗೆಳೆದು ಅಂಕುಡೊಂಕುಗಳನ್ನು ನೇರಮಾತುಗಳಲ್ಲಿ ಚುಚ್ಚಿ ಎಚ್ಚರಿಸಿದ್ದಾರೆ; ಕಳಕಳಿಯಿಂದ ಕಳವಳಪಟ್ಟಿದ್ದಾರೆ. ಅಂತಹ ಕೆಲವು ಕೀರ್ತನೆಗಳ ಉದಾಹರಣೆಗಳು ಇಲ್ಲಿವೆ:

ಕುಲಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ

ಎಲ್ಲಾರೂ ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ

ತಲ್ಲಣಿಸದಿರು ಕಂಡ್ಯ ತಾಳು ಮನವೇ

ನೀನು ಮಾಯೆಯೊಳಗೋ ನಿನ್ನೊಳು ಮಾಯೆಯೋ

ದೇವಿ ನಮ್ಮ ದ್ಯಾವರು ಬಂದರು ನೋಡಿರೇ

ತುಂಬು ಜೀವನ ನಡೆಸಿದ ಕನಕದಾಸರು ಕೊನೆಯಲ್ಲಿ ತಿರುಪತಿ ಬೆಟ್ಟಕ್ಕೆ ಹೋಗಿ, ವೆಂಕಟರಮಣನ ಸನ್ನಿಧಿಯಲ್ಲಿ ಏಕಾಂತಸೇವೆಗೆಂದು ಗರ್ಭಗುಡಿ ಪ್ರವೇಶಿಸಿದರು; ಮತ್ತೆ ಹಿಂತಿರುಗದೆ ಭಗವಂತನಲ್ಲಿಯೇ ಐಕ್ಯರಾಗಿ ಹೋದರು.